1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.5473/2012

ದಿ: 21.08.2019 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾ: 6

ಚಾಸಾ: 52

| | |
|---|---|
| ಹೆಸರು | : ಸೌಮ್ಯ ಶಿವಾಜಿರಾವ್ |
| ಗಂಡನ ಹೆಸರು | : ರಜನಿಕಾಂತ್ |
| ವಯಸ್ಸು | : 40 ವರ್ಷ |
| ಉದ್ಯೋಗ | : ಗೃಹಿಣಿ |
| ವಾಸ | : ಬೆಂಗಳೂರು. |

ಮುಖ್ಯ ವಿಚಾರಣೆ: ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಆರೋಪಿಗಳು ಗೊತ್ತು, ಆರೋಪಿಗಳು ಬಿಡದಿಯ ಹತ್ತಿರ ಒಂದು ಲೇ ಔಟ್ ಮಾಡುತ್ತೇವೆಂದು ಪ್ರಕಟಿಸಿದ್ದು, ಅದರಂತೆ ಅಲ್ಲಿ ನಾನು ಒಂದು ನಿವೇಶನವನ್ನು ಖರೀದಿ ಮಾಡಲು ತೀರ್ಮಾನಿಸಿದ್ದೆವು. ಈ ಸಂಬಂಧವಾಗಿ ಸದರಿ ಸಂಸ್ಥೆಯವರು ಸದರಿ ನಿವೇಶನವನ್ನು ತೋರಿಸಿರುತ್ತಾರೆ. ಸದರಿ ನಿವೇಶನಕ್ಕೆ ಮಾರಾಟ ಬೆಲೆ ನಿಗಧಿ ಮಾಡಿ ಕರಾರು ಪತ್ರವನ್ನು ಮಾಡಿಸಿಕೊಳ್ಳಲು ಬರುವಂತೆ ನನಗೆ ತಿಳಿಸಿರುತ್ತಾರೆ. ಅದರಂತೆ ದಿ: 07.11.2007 ರಂದು ನನಗೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕರಾರು ಪತ್ರದಂತೆ ಮುಂಗಡ ಹಣವಾಗಿ ಆರು ಲಕ್ಷ ರೂ ಹಣವನ್ನು ಸದರಿ ಸಂಸ್ಥೆಯವರಿಗೆ ಪಾವತಿ ಮಾಡಿದ್ದೇನೆ. ಸದರಿ ಹಣಕ್ಕೆ ಸಂಸ್ಥೆಯವರು ರಸೀದಿಯನ್ನು ಕೊಟ್ಟಿರುತ್ತಾರೆ. ಒಂದು ಪಕ್ಷ ನಿವೇಶನ ಬೇಡವಾದರೆ ಬಡ್ಡಿ ಸಹಿತ ಮುಂಗಡ ಹಣವನ್ನು ವಾಪಸ್ ಕೊಡುತ್ತೇವೆಂದು ತಿಳಿಸಿರುತ್ತಾರೆ. ಆ ನಂತರ ಒಂದು ವರ್ಷದ ನಂತರ ಸದರಿ ಸಂಸ್ಥೆಯ ಕಚೇರಿಗೆ ಭೇಟಿ ಕೊಡಲು ಹೋದಾಗ ಅಲ್ಲಿ ಯಾರು ಇರಲಿಲ್ಲ, ಆದ್ದರಿಂದ

ಸದರಿ ಸಂಸ್ಥೆಯವರು ನನಗೆ ಯಾವುದೇ ನಿವೇಶನವನ್ನಾಗಲೀ, ಕೊಟ್ಟಂತಹ ಹಣವನ್ನಾಗಲೀ ಕೊಟ್ಟಿರುವುದಿಲ್ಲ. ಈ ರೀತಿ ಸದರಿ ಸಂಸ್ಥೆಯವರು ನನಗೆ ಮೋಸ ಮಾಡಿರುತ್ತಾರೆ. ಆ ನಂತರ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ ದೂರನ್ನು ಸಲ್ಲಿಸಿದ್ದೇನೆ. ನನಗೆ ಹಾಗೂ ಸದರಿ ಸಂಸ್ಥೆಯವರಿಗೆ ಆದಂತಹ ಕರಾರು ಪತ್ರವನ್ನು ನಿಪಿ.16 ಎಂದು, ರಸೀದಿಯನ್ನು ನಿಪಿ.17 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸ್‌ನವರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ. ಈ ದಿನ 5ನೇ ಆರೋಪಿಯು ಹಾಜರಿದ್ದು, ಅವರನ್ನು ಸಾಕ್ಷಿಯು ಅವರು ಗೊತ್ತಿರುವುದಿಲ್ಲವೆಂದು ತಿಳಿಸಿರುತ್ತಾರೆ. 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಅವರು ಗೈರುಹಾಜರಿದ್ದು, ಅವರ ಪರ ವಕೀಲರು ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಪಾಟೀ ಸವಾಲು: 1, 2ನೇ ಆರೋಪಿಗಳ ಪರ ಶ್ರೀ ಬಿಎಸ್ ವಕೀಲರಿಂದ:-

ನಮ್ಮ ಕುಟುಂಬದ ಸ್ನೇಹಿತರ ಮುಖಾಂತರ ಆರೋಪಿಗಳು ಸದರಿ ಲೇ ಔಟ್‌ನ್ನು ಮಾಡುತ್ತಿದ್ದಾರೆಂಬ ವಿಷಯ ತಿಳಿಯಿತು. ಆದರೆ ನಾನು ಮುಂಗಡ ಹಣವನ್ನು ಸಂಸ್ಥೆಯ ಹೆಸರಿಗೆ ಚೆಕ್‌ನ್ನು ನೀಡಿರುತ್ತೇನೆ. ಸದರಿ ಸಂಸ್ಥೆಯ ಮಾಲಿಕರು ಭಾಸ್ಕರ್ ರೆಡ್ಡಿ ಎಂದು ತಿಳಿದಿರುತ್ತದೆ. ಸದರಿ ಭಾಸ್ಕರ್ ರೆಡ್ಡಿರವರ ಕಚೇರಿಯಲ್ಲಿ ಅನೇಕ ಕೆಲಸಗಾರರು ಕೆಲಸ ಮಾಡುತ್ತಿದ್ದರು. ಸದರಿ ಭಾಸ್ಕರ್‌ರೆಡ್ಡಿರವರನ್ನು ಹೊರತುಪಡಿಸಿ ಬೇರೆಯವರ ಜೊತೆ ನಾನು ಯಾವುದೇ ವ್ಯವಹಾರ ಮಾಡಿರುವುದಿಲ್ಲ.

ಪಾಟೀ ಸವಾಲು: 5ನೇ ಆರೋಪಿಗಳ ಪರ ಶ್ರೀ ಕೆಎನ್‌ಎಸ್ ವಕೀಲರಿಂದ:-

ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 5ನೇ ಆರೋಪಿಯನ್ನು ಈ ದಿನವೇ ಪ್ರಥಮ ಬಾರಿ ನೋಡುತ್ತಿದ್ದೇನೆಂದರೆ ಸರಿ. 5ನೇ ಆರೋಪಿಯ ಜೊತೆ ನಾನು ಯಾವುದೇ ಹಣದ ವ್ಯವಹಾರ ಮಾಡಿಲ್ಲ ಎಂದರೆ ಸರಿ.

ಪಾಟೀ ಸವಾಲು: 9ನೇ ಆರೋಪಿಗಳ ಪರ ಶ್ರೀ ಎಸ್‌ಎಸ್ ವಕೀಲರಿಂದ:-

9ನೇ ಆರೋಪಿಯನ್ನು ಈ ಮೊದಲು ಅವರನ್ನು ನೋಡಿಲ್ಲ ಎಂದರೆ ಸರಿ. 9ನೇ ಆರೋಪಿಯ ಜೊತೆ ನಾನು ಯಾವುದೇ ಹಣದ ವ್ಯವಹಾರ ಮಾಡಿಲ್ಲ ಎಂದರೆ ಸರಿ.

ಮರುವಿಚಾರಣೆ: ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ